## ಕಳೆದ ಸಂಚಿಕೆಯಲ್ಲಿ

ಸುಗಂಧಾ ರಿತಿಕ್‌ನನ್ನು, ಊರನ್ನು ಬಿಟ್ಟು ತಾಯಿ ಮನೆಗೆ ಮರಳುತ್ತಾಳೆ. ತನ್ನ ಕೆಲಸವನ್ನು ವರ್ಗಾವಣೆ ಮಾಡಿಸುವ ಬಗ್ಗೆ ಅಮ್ಮ ಪ್ರಸ್ತಾಪ ಮಾಡುವುದಲ್ಲದೆ ಪ್ರಭಾವಿಗಳ ಮೂಲಕ ಈ ಕೆಲಸ ಮಾಡಿಸಿಕೊಳ್ಳುವುದಾಗಿ ಸುಗಂಧಾಗೆ ಹೇಳುತ್ತಾರೆ. ಸುಗಂಧಾ ಅಮ್ಮನ ಬಳಿ ತಂದೆಯ ನೆನಪುಗಳ ಬಗ್ಗೆ ಪ್ರಸ್ತಾಪ ಮಾಡುತ್ತಾಳೆ. 'ಈ ಸಮಾಜ ಗಂಡನಿಂದ ಬೇರೆಯಾದ ಹೆಣ್ಣನ್ನು ಸುಖವಾಗಿರಲು ಬಿಡಲ್ಲ' ಎಂಬ ಮಾತನ್ನು ಅಮ್ಮ ಹೇಳಿದಾಗ ಸುಗಂಧಾಗೆ ವಾಸ್ತವದ ಅರಿವಾಗುತ್ತದೆ. ಅಂತೂ ಅಮ್ಮನ ಸತತ ಪ್ರಯತ್ನದ ಫಲವಾಗಿ ಸುಗಂಧಾಗೆ ಜಬಲಪುರದಿಂದ ಸಾಗರಕ್ಕೆ ವರ್ಗಾವಣೆಯಾಗುತ್ತದೆ. ಟ್ರಾನ್ಸ್‌ಫರ್ ಆಗಿರೋದು ಒಳ್ಳೆಯದೇ ಆಯಿತು ಎಂದು ಕೀರ್ತಿ ಹೇಳುತ್ತಾಳೆ. ವರ್ಗವಾಗಿ ಬಂದ ಮೇಲೆ ಸುಗಂಧಾಗೆ ಖುಷಭ್‌ರ ಪರಿಚಯವಾಗುತ್ತದೆ.



'ಇಲ್ಲ, ನೀವು ನನಗೆ ಇದನ್ನೇ ಹೇಳಿದ್ದೀರ!'

'ನಾನು ಹೇಳಲಿಲ್ಲ'.

'ಹೇಳಿದ್ದೀರ,' ನಾನು ಹಟ ಹಿಡಿದೆ.

ನಾನು ಸಾಗರವನ್ನು ತಲುಪಿ ರೈಲ್ವೆ ಗೇಟ್ ಬಳಿ ಕಾರನ್ನು ನಿಲ್ಲಿಸಿದೆ. ನಾನು ನನ್ನ ಕಾರನ್ನೇ ತೆಗೆದುಕೊಂಡು ಹೋಗಿದ್ದೆ, ಆಗ ನಾನೇ ಕಾರನ್ನು ಚಾಲನೆ ಮಾಡುತ್ತಿದ್ದೆ.

'ಏನಾಯ್ತು? ಗೇಟ್ ಓಪನ್ ಆಗಿದೆಯಲ್ಲ?' ಖುಷಭ್ ಹೇಳಿದರು.

'ನೀವೀಗಲೇ ಕಾರಿನಿಂದ ಕೆಳಗಿಳಿಯಿರಿ'

'ಏಕೆ? ತಮಾಷೆ ಮಾಡ್ತಿದ್ದೀರ?' ಖುಷಭರಿಗೆ ಆಶ್ಚರ್ಯವಾಯಿತು.

'ಅಂದ್ರೆ ಇನ್ನು ನಾನು ನಿಮ್ಮನ್ನು ಹೊರಲಾರೆ. ಏಕೆಂದರೆ ನೀವು ಇದಕ್ಕೆ ಯೋಗ್ಯರಲ್ಲ. ನಾವು ಈ ಕ್ಷಣವೇ ಬೇರೆಯಾಗಬೇಕು. ನೀವು ಜಗತ್ತಿನಲ್ಲೇ ಸಭ್ಯ ಪ್ರೊಫೆಸರ್ ಆಗಿದ್ದೀರ; ನೀವು ನನ್ನಂಥ ಭ್ರಷ್ಟ ಮಹಿಳೆಯೊಂದಿಗಿನ ಸಂಬಂಧವನ್ನು ಮುರಿದುಕೊಳ್ಳಬೇಕು', ನಾನು ಕೈಚಾಚಿ ಕಾರಿನ ಬಾಗಿಲನ್ನು ತೆರೆದೆ.

ಖುಷಭ್ ಕಕ್ಕಾಬಿಕ್ಕಿಯಿಂದ ಕೆಳಗಿಳಿದರು. ಅವರಿಗೆ ನನ್ನ ವರ್ತನೆಯಿಂದ ಆಶ್ಚರ್ಯವಾಗಿತ್ತು. ಖುಷಭರನ್ನು ಕೆಳಗಿಳಿಸಿ, ಕಾರನ್ನು ಮುಂದಕ್ಕೆ ಚಲಾಯಿಸಿದೆ. ಖುಷಭರಿಗೆ ಮಕರೋನಿಯಾ ಸ್ಟೇಷನ್ ಕಡೆಯಿಂದ ಬರುವ ಚಾಂಪ್‌ಟ್ಯಾಕ್ಸಿ ರೈಲ್ವೆ ಗೇಟಿನ ಬಳಿ ಸಿಗುತ್ತವೆ, ಅಲ್ಲಿಂದ ಅವರು ನಗರಕ್ಕೆ ಹೋಗುತ್ತಾರೆ ಎಂಬುದು ನನಗೆ ಗೊತ್ತಿತ್ತು. ಅವರೊಂದಿಗೆ ಹೀಗೆ ವರ್ತಿಸಿ ನನಗೆ ಲೇಶಮಾತ್ರವೂ ದುಃಖವಾಗಲಿಲ್ಲ. ಅವರು ಇದಕ್ಕೇ ಯೋಗ್ಯರಾಗಿದ್ದರು. ಅವರಿಗೆ ನನ್ನ ವಿಚಾರಗಳು ಮತ್ತು ನನ್ನ ಭಾವನೆಗಳನ್ನು ಗೇಲಿ ಮಾಡುವ ಅಧಿಕಾರವಿರಲಿಲ್ಲ. 'ನೀವು ನನ್ನ ಜಾಗದಲ್ಲಿ ಶೀಘ್ರವೇ ಬೇರೊಬ್ಬ ಪುರುಷನನ್ನು ಹುಡುಕಿಕೊಳ್ತೀರ' ಎಂದು ಎಷ್ಟು ನಿಶ್ಚಿಂತೆಯಿಂದ ಹೇಳಿದರಲ್ಲ... ಅವರಾದರೂ ತಮ್ಮ ಬಗ್ಗೆ ಏನು ಹೇಳುತ್ತಿದ್ದರು? ಅವರು ಹೆಂಡತಿಯಿದ್ದರೂ ಬೇರೆ ಮಹಿಳೆಯರ ಹಿಂದೆ ಅಲೆಯುತ್ತಿದ್ದರು. ನಾನು ಈ ಬಗ್ಗೆ ಅವರಿಗೇನೂ ಹೇಳಿರಲಿಲ್ಲ, ಇಷ್ಟು ವ್ಯಂಗ್ಯದ ಮಾತನ್ನು ಸಹ ಹೇಳಿರಲಿಲ್ಲ.

ಅಂದೇ ನಾನು ಅಮ್ಮನ ಬಳಿಗೆ ಹೊರಟು ಬಂದೆ. ಖುಷಭ್ ಬಯಸಿದ್ದರೂ ನನ್ನನ್ನು ಭೇಟಿಯಾಗಲು ಸಾಧ್ಯವಾಗಬಾರದೆಂದು ಎರಡು ದಿನಗಳ ರಜ ಹಾಕಿದ್ದೆ. ಅವರು ಒಮ್ಮೆ ಭಿಂದವಾಡಾಕ್ಕೆ ಹೋದರೆ ಮತ್ತೆ ಬೇಗನೆ ಮರಳಿ ಬರುವವರಲ್ಲ ಎಂಬುದು ನನಗೆ ತಿಳಿದಿತ್ತು. ಈಗಲೇ ಭೇಟಿಯಾದರೆ ಅತ್ತೂ ಕರೆದು ರೋದಿಸುತ್ತಾರೆ. ನಾನು ರಿತಿಕ್‌ನಿಂದ ಬೇರೆಯಾದ ನಂತರ ಪುರುಷರ ಬಗ್ಗೆ ಇನ್ನಷ್ಟು ಕಠೋರವಾಗಿದ್ದೆ ಎಂಬುದನ್ನು ಮನಗಂಡೆ. ಅಮ್ಮನ ಬಳಿ ಎರಡು ದಿನಗಳಿದ್ದು ಮರಳಿ ಹೋದಾಗ ನಾನು ಒತ್ತಡದಿಂದ ಮುಕ್ತಳಾದೆ ಎಂದು ಅನ್ನಿಸಿತು. ನಾನು ಖುಷಭರ ಬಗ್ಗೆ ಅಮ್ಮನಿಗೆ ಏನನ್ನೂ ಹೇಳಿರಲಿಲ್ಲ. ಅವರಿಗೆ ಹೇಳಲು ಯೋಗ್ಯ ವಿಷಯವಾಗಿದೆ ಎಂದೂ ಅನ್ನಿಸಲಿಲ್ಲ. ನಾನು ಭೂಪಾಲ್‌ನ ನನ್ನ ಕಚೇರಿಯ ಕೆಲಸ ಕಾರ್ಯಗಳಲ್ಲಿ ಮಗ್ನಳಾದೆ. ಮನೆಯಲ್ಲಿದ್ದಾಗ ಟಿ.ವಿ. ನೋಡಿ ಸಮಯ ಕಳೆಯುತ್ತಿದ್ದೆ. ಈ ನಡುವೆ ನಾನು ಮತ್ತೊಮ್ಮೆ ಲೇಖನಗಳನ್ನು ಬರೆಯಲು ಆರಂಭಿಸಿದೆ. ಅವುಗಳನ್ನು ಪ್ರಕಟಣೆಗಾಗಿ ಬೇರೆ ಬೇರೆ ಪತ್ರಿಕೆಗಳಿಗೆ ಕಳುಹಿಸಲು ಆರಂಭಿಸಿದೆ. ನಾನು ಬರವಣಿಗೆಯನ್ನು ಪ್ರಾರಂಭಿಸಿದ್ದರಿಂದ ದೊಡ್ಡ ಲಾಭವೇ ಆಯಿತು. ಮನಸ್ಸಿನ ವಿಚಾರಗಳನ್ನು ಕಾಗದದಲ್ಲಿ ಇಳಿಸುತ್ತಿದ್ದೆ, ಇದರಿಂದ ಮನಸ್ಸಿಗೆ ಶಾಂತಿ ಲಭಿಸುತ್ತಿತ್ತು. ಕೆಲವರು ನನ್ನ ಲೇಖನಗಳಿಂದ ನನಗೆ ಪರಿಚಿತರಾದರು. ನನ್ನ ಖಾತೆಯಿದ್ದ ಬ್ಯಾಂಕ್‌ನಲ್ಲಿ 'ಹಿಂದಿ ಸಪ್ತಾಹ'ವನ್ನು ಆಚರಿಸಲಾಯಿತು. ನಾನು ಬರೆಯುವ ವಿಚಾರ ಅಲ್ಲಿದ್ದ ಗುಮಾಸ್ತೆಗೆ ತಿಳಿದಿತ್ತು. ಅವರು ಆ ಸಮಾರಂಭದ ಕವಿಗೋಷ್ಠಿಗೆ, ಕವನ ವಾಚಿಸಲು ನನ್ನನ್ನು ಆಹ್ವಾನಿಸಿದರು. ನಾನು ಅದುವರೆಗೆ ಕೆಲವೇ ಕವನಗಳನ್ನು ಬರೆದಿದ್ದೆ, ಅದೂ ಅನೇಕ ವರ್ಷಗಳ ಹಿಂದೆ.

ಆ ಕವಿಗೋಷ್ಠಿಗೆ ಅನೇಕ ಹೊಸ ಕವನಗಳನ್ನು ಬರೆದೆ. ಬರೆಯಲು ಕಷ್ಟವಾಯಿತು. ಆದರೆ ತುಂಬಾ ಸಂತಸವಾಯಿತು. ಕಾರ್ಯಕ್ರಮದಲ್ಲಿ ನಾನು ನನ್ನ ಹೊಸ ಕವನಗಳನ್ನು ಓದಿದೆ. ಎಲ್ಲರೂ ಪ್ರಶಂಸಿಸಿದರು. ಅವರು ನಿಜವಾಗಿ ಪ್ರಶಂಸಿಸಿದರೋ, ಇಲ್ಲವೋ ತಿಳಿಯದು; ಆದರೆ ಎಲ್ಲರಿಗೂ ಅವರವರ ಪ್ರಶಂಸೆ ಇಷ್ಟವಾಗುತ್ತದೆ. ನನಗೂ ಇಷ್ಟವಾಯಿತು. ಅದೇ ಕಾರ್ಯಕ್ರಮದಲ್ಲಿ ವಿಶಾಲ್ ಪಟೇಲನ ಪರಿಚಯವಾಯಿತು. ಅವನೇ ಗೋಷ್ಠಿಯ ಅಧ್ಯಕ್ಷತೆಯನ್ನು ವಹಿಸಿದ್ದ. ಅವನು ಅದೇ ಬ್ಯಾಂಕಿನ ಸಿಬ್ಬಂದಿಯಾಗಿದ್ದ. ಮೊದಲು ಅವನ ಬಗ್ಗೆ ನನ್ನ ಗಮನಹರಿದಿರಲಿಲ್ಲ, ಇದಕ್ಕೂ ಮೊದಲು ಅವನ ಗಮನ ಸಹ ನನ್ನ ಮೇಲೆ ಹರಿದಿರಲಿಲ್ಲ. ಅವನು ನನ್ನ ಕವನಗಳಿಂದ ಪ್ರಭಾವಿತನಾದ.

'ನಾನು ಕವನಗಳನ್ನು ಕಡಿಮೆ ಬರೆಯುತ್ತೇನೆ, ಲೇಖನಗಳನ್ನು ಹೆಚ್ಚು ಬರೆಯುತ್ತೇನೆ' ನನ್ನ ಬಗ್ಗೆ ಹೇಳಿದೆ.

'ನಾನು ನಿಮ್ಮ ಲೇಖನಗಳನ್ನು ಓದಿದ್ದೇನೆ, ನೀವು 'ಅವರೇ' ಎಂಬುದು ತಿಳಿದಿರಲಿಲ್ಲ' ಎಂದ ವಿಶಾಲ್ ಪಟೇಲ್. ಅವನು ನೋಡಲು ಆಕರ್ಷಕ ಮೈಕಟ್ಟನ್ನು ಹೊಂದಿದ್ದ. ನಾನು ಅವನ ಬಗ್ಗೆ ಆಕರ್ಷಿತಳಾದೆ.

'ನೀವು ವಿವಾಹಿತರೇ ಅಥವಾ ಅವಿವಾಹಿತರೇ?' ಎಂದು ಕೇಳಲು ಮನಸ್ಸಾಯಿತು. ಏಕೆಂದರೆ ನಾನು ಈ ಬಾರಿ ಖುಷಭರೊಂದಿಗಿನ ಅನುಭವವನ್ನು ಮತ್ತೆ ಪಡೆಯಲು ಬಯಸುತ್ತಿರಲಿಲ್ಲ. ನಾನು ಮೇಲು ನೋಟಕ್ಕೆ ಶಾಂತಳಾಗಿದ್ದೆ, ಆದರೆ ಮನಸ್ಸಿನಲ್ಲಿ ಕೋಲಾಹಲ ಎದ್ದಿತ್ತು. ನಾನು ಖುಷಭರ ಹೇಳಿಕೆಯಂತೆ ಇನ್ನೊಬ್ಬ ಪುರುಷನನ್ನು ಶೀಘ್ರವೇ ಹುಡುಕಿಕೊಂಡಿದ್ದನೇ? ಈಡಿಯಟ್! ನಾನು ಮನಸ್ಸಿನಲ್ಲಿಯೇ ಬಡಬಡಿಸಿದೆ, ಖುಷಭರನ್ನು ನಿಂದಿಸಿದೆ. ನಾನು ಖುಷಭರನ್ನು ಭೇಟಿಯಾದ ನಂತರ ದೈಹಿಕವಾಗಿ ಸಂತುಷ್ಟಳಾಗಿದ್ದೆ. ಆದರೆ ಮಾನಸಿಕವಾಗಿ ಸಂತುಷ್ಟೆಯಾಗಿರಲಿಲ್ಲ. ಇದಕ್ಕೊಂದು ಕಾರಣವಿತ್ತು; ಅವರು ಬುದ್ಧಿಜೀವಿ ವರ್ಗದವರಾಗಿದ್ದರು, ಆದರೆ ಬುದ್ಧಿಜೀವಿಯಾಗಿರಲಿಲ್ಲ. ಅವರನ್ನು ತ್ಯಜಿಸುವಾಗ ನನಗೆ ಲೇಶಮಾತ್ರವೂ ದುಃಖವಾಗಿರಲಿಲ್ಲ. ನಾನು ಸಿಮೋನ್‌ದ ಬೋವುವಾರರ 'ಸೆಕೆಂಡ್ ಸೆಕ್ಸ್' ಪುಸ್ತಕವನ್ನು ಸಂಪೂರ್ಣವಾಗಿ ಓದಿದ್ದೆ. ನಾನು ಸಿಮೋನರಂತೆ ಬದುಕಲು ಬಯಸುತ್ತೇನೆ, ಇಲ್ಲ ಇಲ್ಲ, ಅವರಿಗಿಂತಲೂ ಮುಂದುವರೆಯಬೇಕು ಎಂದು ನನಗೆ ಅನ್ನಿಸಿತು. ನಾನೀಗ ವಿಶೇಷವಾಗಿ ಬದುಕಲು ಬಯಸುತ್ತಿದ್ದೆ, ಆದರೆ ರಿತಿಕ್‌ನೊಂದಿಗೆ ಬದುಕಿದಂತೆ ಅಲ್ಲ.

ನನಗೆ ವಿಶಾಲ್ ಪಟೇಲ್ ಬುದ್ಧಿಜೀವಿಯಂತೆ ಕಂಡು ಬಂದ. ಅವನು ಸಾಗರಕ್ಕೆ ವರ್ಗಾವಣೆ ಆಗುವುದಕ್ಕೆ ಮೊದಲು ಲಖನೌದಲ್ಲಿದ್ದ; ಅಲ್ಲಿ ಅವನು ಒಂದು ಥಿಯೇಟರ್‌ನೊಂದಿಗೆ ಕಲೆತಿದ್ದ. ಅವನ ಬಗ್ಗೆ ಇದನ್ನು ತಿಳಿದು ಖುಷಿಯಾಗಿತ್ತು. ನಾನು ಭೂಪಾಲ್‌ನ ರವೀಂದ್ರ ಭವನದಲ್ಲಿ ಕೆಲವು ನಾಟಕಗಳನ್ನು ನೋಡಿದ್ದೆ. ಅವು ನನಗೆ ಇಷ್ಟವಾಗಿದ್ದವು.

(ಸಶೇಷ)